ಬಗ್ಗೆ, ರಸ್ತೆಗಳು ಅಸ್ತವ್ಯಸ್ತವಾಗಿರುವುದರ ಬಗ್ಗೆ, ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ, ಮತ್ತೆ ಮಾನ್ಯ ಹೆಚ್.ಡಿ. ಬಸವರಾಜ್‌ರವರು ಸಹ ವಿರಾಜಪೇಟೆಯಲ್ಲಿ ಆಗಿರುವಂತಹ ನಷ್ಟದ ಬಗ್ಗೆ, ವಿಶೇಷವಾಗಿ ಕಾಡಿನಲ್ಲಿರುವಂತಹ ಗಿರಿ ಜನರ ಬಗ್ಗೆ, ಪ್ರಸ್ತಾಪ ಮಾಡಿದ್ದಾರೆ, ನಾನು ಸರ್ಕಾರದ ಪರವಾಗಿ, ಮಾನ್ಯ ಕಂದಾಯ ಸಚಿವರು ಇವತ್ತು, ಅಥವಾ ನಾಳೆ ತತ್‌ಕ್ಷಣ ಜಿಲ್ಲಾಧಿಕಾರಿಗಳೊಡನೆ ಮಾತನಾಡಿ, ಅವರಿಂದ ಒಂದು ವರದಿಯನ್ನು ಸರ್ಕಾರ ತರಿಸಿಕೊಳ್ಳುತ್ತದೆ.

12.40 ಪಿಎಂ

ವರದಿಯನ್ನು ತರಿಸಿಕೊಂಡು ಮಳೆಯಿಂದ ನಷ್ಟವಾಗಿರುವ ಕಡೆಗಳಲ್ಲಿ ತತ್‌ಕ್ಷಣ ಏನು ಪರಿಹಾರ ತೆಗೆದುಕೊಳ್ಳ ಬೇಕೋ ಅದನ್ನೂ ಕೂಡ ನಾವು ತೆಗೆದುಕೊಳ್ಳುತ್ತೇವೆ. ರಸ್ತೆಗಳನ್ನು ಸರಿಪಡಿಸಲು ಮತ್ತು ಅಲ್ಲಿ ಆಗಿರತಕ್ಕಂಥ ನಷ್ಟದ ಬಗ್ಗೆ ಯಾವ ರೀತಿ ಪರಿಹಾರವನ್ನು ಕೊಡಬೇಕು ಎನ್ನುವ ಬಗ್ಗೆ ಇವತ್ತು ಸರ್ಕಾರದಲ್ಲಿ ಇರತಕ್ಕಂಥ ನಿಯಮಾವಳಿಗಳ ಪ್ರಕಾರ ನಾವು ಪ್ರಯತ್ನವನ್ನು ಮಾಡುತ್ತೇವೆ ಎನ್ನುವ ಭರವಸೆಯನ್ನು ಸಹ ನಾನು ಕೊಡುತ್ತೇನೆ. ತತ್‌ಕ್ಷಣ ಗಿರಿಜನರು ಬದುಕಲು ತಕ್ಷಣ ಟಾರ್ಪಾಲುಗಳನ್ನು ಹಾಕಿಕೊಡುಬೇಕು ಎಂದು ಹೇಳಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯ ಮೂಲಕ ಅದನ್ನು ಮಾಡಲು ಅವಕಾಶವಿದೆಯೋ ಅಥವಾ ಜಿಲ್ಲಾ ಪಂಚಾಯಿತಿಯ ಮೂಲಕ ಮಾಡಲು ಅವಕಾಶವಿದೆಯೋ ಎನ್ನುವುದನ್ನು ನೋಡಿ, ಅದನ್ನೂ ಮಾಡುತ್ತೇವೆ ಎನತಕ್ಕಂಥ ಭರವಸೆಯನ್ನು ನಾನು ಈ ಸಂದರ್ಭದಲ್ಲಿ ಕೊಡುವುದರ ಜೊತೆಗೆ, ಗೌರವಾನ್ವಿತ ಸದಸ್ಯರುಗಳಿಗೆ ನನ್ನದೊಂದು ಕಿವಿ ಮಾತೆಂದರೆ, ತಾವು ವಿಚಾರವನ್ನು ಪ್ರಸ್ತಾಪ ಮಾಡುವಾಗ ಕೆಲವು ವಿಚಾರಗಳನ್ನು ಸ್ಪೆಸಿಫಿಕ್ ಆಗಿ ಹೇಳಿದ್ದೀರಿ. ಅದನ್ನು ಕಂದಾಯ ಸಚಿವರಿಗೆ ಬರೆದು ಕಳುಹಿಸಿದರೆ, ತುರ್ತಾಗಿ ಈ ಕೆಲಸವನ್ನು ಮಾಡಲು ಅನುಕೂಲವಾಗುತ್ತದೆ. ಆದ್ದರಿಂದ ತಾವು ದಯವಿಟ್ಟು ಅದನ್ನು ಮಾಡಬೇಕು ಎನ್ನುವ ಸಲಹೆಯನ್ನು ಕೊಡುತ್ತೇನೆ.

ಈ) ವಿಷಯ : ಕರಾವಳಿ ಪ್ರದೇಶಗಳಲ್ಲಿ ಕಡಲ ಕೊರೆತದಿಂದ ಉಂಟಾಗಿರುವ ಸಮಸ್ಯೆಗಳ ಬಗ್ಗೆ.

ಶ್ರೀ ಕೆ. ರಘುಪತಿ ಭಟ್ (ಉಡುಪಿ) : ಮಾನ್ಯ ಸಭಾಧ್ಯಕ್ಷರೇ, ಕರ್ನಾಟಕದ ಕರಾವಳಿ ತೀರದ ಬಹಳ ದೊಡ್ಡ ಸಮಸ್ಯೆಯನ್ನು ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲು ಇಚ್ಛೈಪಡುತ್ತೇನೆ. ನಮ್ಮಲ್ಲಿ ಪ್ರತಿವರ್ಷ ಮಳೆಗಾಲದಲ್ಲಿ ಎದುರಿಸುವಂಥ ದೊಡ್ಡ ಸಮಸ್ಯೆ ಎಂದರೆ ಕಡಲ ಕೊರೆತದ ಸಮಸ್ಯೆ. ಮಳೆ ಪ್ರಾರಂಭವಾದ ದಿವಸದಿಂದ ಕಡಲ ಕಿನಾರೆಯಲ್ಲಿ ರಸ್ತೆ ಬಂದ್ ಆಗುವ ಮಟ್ಟಕ್ಕೆ ಕಡಲ ಕೊರೆತದ ಸಮಸ್ಯೆ ನಮ್ಮ ಜಿಲ್ಲೆಯಲ್ಲಿ ಮತ್ತು ಕರಾವಳಿ ತೀರದಲ್ಲಿ ಹಮ್ಮಿಕೊಂಡಿದೆ. ಮರವಂತೆ ಎನ್ನುವ ಜಾಗದಲ್ಲಿ ರಾಷ್ಟ್ರೀಯ ಹೆದ್ದಾರಿ–ಎನ್, ಹೆಜ್ : 17 ಕಟ್ ಆಗುವವರೆಗೆ ಕಡಲ ಕೊರೆತದ ಸಮಸ್ಯೆ ಉಲ್ಬಣವಾಗಿದೆ. ಅದೇ ರೀತಿ ಮಲ್ಪೆಯಲ್ಲಿ ಪ್ರಧಾನಮಂತ್ರಿ ಗ್ರಾಮೀಣ ಸಡಕೆ ಯೋಜನೆಯಲ್ಲಿ

ನಿರ್ಮಾಣ ಆಗಿರುವ 1 ಕೋಟಿ 48 ಲಕ್ಷ ರೂಪಾಯಿಗಳ ಕಾಂಕ್ರೀಟ್ ರಸ್ತೆ ಕಟ್ ಆಗುವವರೆಗೆ ಕಡಲ ಕೊರೆತದ ಸಮಸ್ಯೆ ಉಲ್ಬಣವಾಗಿದೆ. ಕರಾವಳಿ ತೀರದ ಎಲ್ಲಾ ಕ್ಷೇತ್ರಗಳಲ್ಲೂ ಈ ಸಮಸ್ಯೆ ಉಂಟಾಗುತ್ತಿದೆ. ಇದರ ಬಗ್ಗೆ ಪ್ರತಿವರ್ಷದಂತೆ ತಾತ್ಕಾಲಿಕ ಕ್ರಮಗಳನ್ನು ಕೈಗೊಳ್ಳದೇ, ಎರಡು ದಿವಸಗಳಲ್ಲಿ ತಜ್ಞರ ಕಾರ್ಯಪಡೆಯನ್ನು ಅಲ್ಲಿಗೆ ಕಳುಹಿಸಿ, ಅದರ ಬಗ್ಗೆ ಅಧ್ಯಯನ ಮಾಡಿ ಅದಕ್ಕೆ ಒಂದು ಪರ್ಮನೆಂಟ್ ಸಲ್ಯೂಷನನ್ನು ಮಾಡಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) : ಸನ್ಮಾನ್ಯ ಅಧ್ಯಕ್ಷರೇ, ವಿಶೇಷವಾಗಿ ಕರಾವಳಿ ಪ್ರದೇಶಗಳಲ್ಲಿ ಅಂದರೆ ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ, ಅದರಲ್ಲೂ ಸುರತ್ಕಲ್, ಮಂಗಳೂರು, ಉಳ್ಳಾಲ ಮತ್ತು ಕಾಪು ಕ್ಷೇತ್ರಗಳಲ್ಲಿ ವಿಪರೀತವಾದಂಥ ಕಡಲ ಕೊರೆತದ ದುರಂತಕ್ಕೆ ಒಳಗಾಗಿ ಸಾಕಷ್ಟು ಮನೆಗಳು ಹಾಳಾಗಿವೆ, ಸಾಕಷ್ಟು ಮನೆಗಳು ನುಚ್ಚುನೂರಾಗಿ ಅನೇಕರು ನಿರ್ಗತಿಕರಾಗುವಂಥ ದುಸ್ಥಿತಿ ಕೂಡ ಇವತ್ತು ಬಂದಿದೆ. ಒಂದು ಕಡೆ ಅತಿವೃಷ್ಟಿ, ಇನ್ನೊಂದು ಕಡೆ ಬಿರುಗಾಳಿ, ಮತ್ತೊಂದು ಕಡೆ ಕಡಲ ಕೊರೆತದ ಸಮಸ್ಯೆಗಳಿವೆ, ಬಿರುಗಾಳಿಗೆ ಸಿಕ್ಕಿ ಸುಮಾರು ನಾಲ್ಕು ಬೋಟುಗಳು ಯಾವ ರೀತಿ ದುರಂತಕ್ಕೆ ಒಳಗಾಗಿವೆ ಎಂದರೆ ಸುಮಾರು ಎರಡು ಕಿ.ಮೀ. ದೂರಕ್ಕೆ ಹೋಗಿ ಅಲೆಗಳಿಂದ ಸಮುದ್ರ ತೀರಕ್ಕೆ ಬಡಿದು ನುಚ್ಚುನೂರಾಗಿ ಹೋಗಿದೆ. ಮತ್ತೊಂದು ದುರಂತವೆಂದರೆ, ಈ ನಾಲ್ಕು ಬೋಟುಗಳಲ್ಲಿ ಎರಡು ಬೋಟುಗಳಿಗೆ ಇನ್‌ಶೂರೆನ್ಸ್ ಮಾಡಿಸಿಲ್ಲ. ನಾವು ಲೆಕ್ಕಾಚಾರ ಹಾಕಿದರೆ ಸುಮಾರು 1 ಕೋಟಿ 40 ಲಕ್ಷ ರೂಪಾಯಿಗಳಷ್ಟು ನಷ್ಟ ಬೋಟುಗಳಿಂದ ಆಗಿದೆ. ಮನೆಗಳಿಗೆ ಸಂಬಂಧಪಟ್ಟಂತೆ ಸುಮಾರು ಒಂದು ಕೋಟಿಗೂ ಹೆಚ್ಚಿನ ನಷ್ಟವಾಗಿದೆ. ಇಲ್ಲಿ ತಮ್ಮ ಮೂಲಕ ನಾನು ಕೇಳುತ್ತಿರುವಂಥಾದ್ದೇನೆಂದರೆ, ಈ ದೋಣಿಗಳಿಗೆ ಕೊಡಬೇಕಾದ ಪರಿಹಾರ ಧನವನ್ನು ಕೊಟ್ಟು, ಅವರು ಪುನರ್‌ಜೀವನ ಮಾಡುವ ನಿಟ್ಟಿನಲ್ಲಿ ಅವರಿಗೆ ಬೇಕಾದಂಥ ಎಲ್ಲಾ ಸವಲತ್ತುಗಳನ್ನು ಕೊಡುವಂಥಾದ್ದು ಆಗಬೇಕು. ಇನ್‌ಶೂರೆನ್ಸ್ ಇಲ್ಲದವರಿಗೆ ಕೂಡ ಸರ್ಕಾರದ ಕಡೆಯಿಂದ ನೆರವು ಕೊಡಬೇಕು ಎನ್ನುವ ವಿಶೇಷ ವಿನಂತಿಯನ್ನು ನಾನು ಮಾಡುತ್ತಿದ್ದೇನೆ. ಇದರ ಜೊತೆಗೆ ಇನ್ನೊಂದು ವಿನಂತಿ ಎಂದರೆ, ಕಡಲ ಕೊರೆತಕ್ಕೆ ಶಾಶ್ವತ ಪರಿಹಾರ ಮಾಡುವ ಬಗ್ಗೆ ಇಲ್ಲಿಯವರೆಗೆ ಕೇವಲ ಹೇಳಿಕೆಗಳು ಬಂದಿವೆಯೇ ದಿನ, ಈ ಬಗ್ಗೆ ಫ್ರೆಂಚ್ ಹಾಗೂ ಇನ್ನಿತರ ಕಡೆಗೆ ಪ್ರವಾಸವಾಗಿದೆಯೇ ವಿನಃ ಯಾವುದೇ ಶಾಶ್ವತ ಪರಿಹಾರವಾಗಿಲ್ಲ. ಈ ನಿಟ್ಟಿನಲ್ಲಿ ಶಾಶ್ವತ ಪರಿಹಾರಕ್ಕೆ ಕ್ರಮಗಳನ್ನು ಕೈಗೊಳ್ಳಬೇಕು. ಹಾಗೂ ತುರ್ತು ತಾತ್ಕಾಲಿಕ ಪರಿಹಾರಗಳನ್ನು ಮಾಡುವ ನಿಟ್ಟಿನಲ್ಲಿ ಎಲ್ಲಿ ಕಲ್ಲುಗಳನ್ನು ಹಾಕಬೇಕು, ಎಲ್ಲಿ ಮರಳಿನ ಗೋಣಿಚೀಲಗಳನ್ನು ಹಾಕಬೇಕು ಎಂಬುದನ್ನು ನೋಡಬೇಕು. ಕಡಲ ಕೊರೆತಕ್ಕೆ ಒಳಗಾಗಿ ಮನೆಗಳು ಹೆಚ್ಚಿನ ರೀತಿಯಲ್ಲಿ ಹಾಳಾಗದಂತೆ ಎನೊಂದು

ಕ್ರಮ ತೆಗೆದುಕೊಳ್ಳಬೇಕು ಎನ್ನುವ ನಿಟ್ಟಿನಲ್ಲಿ ಕೂಡ ತಕ್ಷಣ ಕ್ರಮ ಕೈಗೊಳ್ಳಬೇಕು. ಜಿಲ್ಲಾಧಿಕಾರಿಗಳನ್ನು ಕೇಳಿದರೆ ಪರಿಹಾರ ನಿಧಿ ಇಲ್ಲ ಎಂದು ಹೇಳುತ್ತಾರೆ. ಅವರು ತಕ್ಷಣ ಇದಕ್ಕೆ ಸ್ಪಂದಿಸುವಂಥ ನಿಟ್ಟಿನಲ್ಲಿ, ಇದಕ್ಕೆ ಬೇಕಾಗುವಂಥ ಪರಿಹಾರ ನಿಧಿಯನ್ನು ಕೂಡ ರಿಲೀಸ್ ಮಾಡಬೇಕು ಎನ್ನುವ ವಿನಂತಿಯನ್ನು ನಾನು ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಸದಸ್ಯರಾದ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು : ಇದೇ ವಿಷಯದ ಮೇಲ 4–5 ಜನ ಕೊಟ್ಟಿದ್ದಾರೆ. ಒಂದೇ ವಿಷಯದ ಮೇಲೆ ಮಾತನಾಡಲು ಬಹಳ ಜನರಿಗೆ ಅವಕಾಶ ಮಾಡಿಕೊಡಲು ಸಾಧ್ಯವಾಗುವುದಿಲ್ಲ. ದಯಮಾಡಿ ಸದಸ್ಯರು ಸಹಕರಿಸಬೇಕು. ಸಮುದ್ರ ಕೊರೆತ ಎಲ್ಲಾ ಕಡೆಯಲ್ಲೂ ಒಂದೇ. ಅದು ದಕ್ಷಿಣ ಕನ್ನಡದಲ್ಲಿ ಕೊರೆದರೂ ಒಂದೇ, ಉತ್ತರ ಕನ್ನಡದಲ್ಲಿ ಕೊರೆದರೂ ಒಂದೇ, ಆದ್ದರಿಂದ ಈಗ ಅದರ ಬಗ್ಗೆ ಬೇಡ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಎರಡೇ ವಾಕ್ಯದಲ್ಲಿ ಹೇಳುತ್ತೇನೆ, ಉದ್ದವಾಗಿ ಹೇಳುವುದಿಲ್ಲ. ಈಗಾಗಲೇ ವಿಷಯ ಪ್ರಸ್ತಾಪವಾಗಿದೆ. ಉತ್ತರ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ ಹಾಗೂ ದಕ್ಷಿಣ ಕನ್ನಡ ಈ ಮೂರು ಜಿಲ್ಲೆಗಳಲ್ಲಿ ಕಡಲ ಕೊರೆತದಿಂದ ಉಂಟಾಗುವ ಸಮಸ್ಯೆಯ ಗಂಭೀರತೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಅವರು ಹೇಳಿರುವ ಎಲ್ಲಾ ವಿಷಯಗಳಿಗೆ ನಾನು ಸಹಮತಿಯನ್ನು ಸೂಚಿಸುತ್ತಾ, ಅದರ ಜೊತೆಗೆ ಮೀನುಗಾರರ ಸಮಸ್ಯೆಯನ್ನು ಹೇಳಲಿಚ್ಛಿಸುತ್ತೇನೆ, ಸಮುದ್ರ ಕೊರೆತದಿಂದಾಗಿ ಮೀನುಗಾರರಿಗೆ ಬಹಳ ದೊಡ್ಡ ತೊಂದರೆಯಾಗಿದೆ. ಸಮುದ್ರದ ಪಕ್ಕದಲ್ಲಿರುವವರೆಲ್ಲರೂ ಸಾಮಾನ್ಯವಾಗಿ ಮೀನುಗಾರರು. ಅವರಲ್ಲಿ 100ಕ್ಕೆ 95 ಭಾಗ ಮೀನುಗಾರರು. ಅವರಿಗೆ ಮೀನುಗಾರಿಕೆಗೆ ಬಹಳ ದೊಡ್ಡ ತೊಂದರೆಯಾಗಿದೆ. ಅವರು ಬೋಟುಗಳನ್ನು ತೆಗೆಯಲು ಆಗುವುದಿಲ್ಲ ಹಾಗಾಗಿ ಅವರ ಜೀವನೋಪಾಯದ ಸಮಸ್ಯೆ ಬಹಳ ಉಲ್ಬಣವಾಗಿದೆ. ನಾನು ನಮ್ಮ ಜಿಲ್ಲೆಯ ಹಿತದೃಷ್ಟಿಯಿಂದ ಒಂದು ಮಾತನ್ನು ವಿಶೇಷವಾಗಿ ಇಲ್ಲಿ ಉಲ್ಲೇಖ ಮಾಡುತ್ತಿದ್ದೇನೆ. ಇಡೀ ಏಷ್ಯಾ ಖಂಡದಲ್ಲೇ ದೊಡ್ಡ ಯೋಜನೆಯಂಥ ಸೀಬರ್ಡ್ ಯೋಜನೆ ನಮ್ಮ ಜಿಲ್ಲೆಯಾ ಉತ್ತರ ಕನ್ನಡ ಜಿಲ್ಲೆಯಲ್ಲಿ ಬರುತ್ತಿದೆ. ಸೀಬರ್ಡ್ ಯೋಜನೆಯ ಕೆಲಸ ಕಾರವಾರ ಮತ್ತು ಅಂಕೋಲ ತಾಲ್ಲೂಕುಗಳಲ್ಲಿ ಬಹಳ ವೇಗವಾಗಿ ನಡೆದಿದೆ. ಈ ಯೋಜನೆಗಾಗಿ ಸಮುದ್ರಕ್ಕೆ ಕಿ.ಮೀ. ಉದ್ದದಲ್ಲಿ ತಡೆಗೋಡೆಗಳಲ್ಲಿ ಹಾಕಿದ್ದಾರೆ. ಆ ತಡೆಗೋಡೆಗಳನ್ನು ಹಾಕಿರುವುದರ ಪರಿಣಾಮವಾಗಿ ಸಮುದ್ರದ ಅಲೆಗಳು ಬೇರೆ ಬೇರೆ ದಿಕ್ಕಿನಲ್ಲಿ ಚಲಿಸಿ ಹೊಸ ಸಮುದ್ರ ಕೊರೆತಕ್ಕೆ ಕಾರಣವಾಗಿದೆ. ಹಿಂದಿನ ಸರ್ಕಾರವಿದ್ದಾಗಲೂ ನಾನು ಇದನ್ನು ಸದನದ ಮೂಲಕ ಸರ್ಕಾರಕ್ಕೆ ಹೇಳಿದ್ದೆ, ಸೀಬರ್ಡ್ ಯೋಜನೆಯಲ್ಲಿ ತಡೆಗೋಡೆಗಳನ್ನು ನಿರ್ಮಾಣವಾಗಿರುವುದರಿಂದ, ಬೇರೆ ಬೇರೆ ಕಡೆಗಳಲ್ಲಿ ಸಮುದ್ರ

ಕೊರೆತ ನಿರ್ಮಾಣವಾಗುತ್ತಿರುವುದರಿಂದ, ಇದರ ಬಗ್ಗೆ ಒಂದು ವೈಜ್ಞಾನಿಕವಾದಂಥ ಅಧ್ಯಯನವಾಗಿ, ಅದರ ದುಷ್ಪರಿಣಾಮಗಳನ್ನು ತಡೆಗಟ್ಟುವ ಬಗ್ಗೆ ಒಂದು ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. ಕಳೆದ ಶನಿವಾರ, ಭಾನುವಾರಗಳಂದು ನಾನು ಅಂಕೋಲದಲ್ಲಿ ಸಮುದ್ರ ಕೊರೆತದ ಭಾಗಗಳನ್ನು ನೋಡಲು ಹೋಗಿದ್ದೆ. ಆಗ, ಅಲ್ಲಿ 70–80 ವರ್ಷಗಳಾಗಿರುವ ಹಿರಿಯರು ಹೇಳಿದರು, ನಮ್ಮ ಜೀವನದಲ್ಲಷ್ಟೇ ಅಲ್ಲ, ನಮ್ಮ ಅಪ್ಪ, ಅಜ್ಜನ ಜೀವನಗಳಲ್ಲೂ ಸಮುದ್ರ ಕೊರೆತ ಆಗಿದ್ದನ್ನು ನಾವು ಕೇಳಿರಲಿಲ್ಲ, ಈಗ ಸಮುದ್ರ ಕೊರೆತ ಆಗುತ್ತಿದೆ ಎಂದು ಹೇಳಿದರು. ಸೀಬರ್ಡ್ ಯೋಜನೆಯಲ್ಲಿ ತಡೆಗೋಡೆ ಹಾಕಿರುವುದ ಪರಿಣಾಮ ಇನ್ನೊಂದು ಕಡೆಯಲ್ಲಿ ದುಷ್ಪರಿಣಾಮವಾಗುತ್ತಿದೆ. ಹಾಗಾಗಿ ಸರ್ಕಾರ ಈ ಎಲ್ಲಾ ವಿಷಯಗಳ ಬಗ್ಗೆ ಅಧ್ಯಯನ ಮಾಡಿ, ಸಮುದ್ರ ಕೊರೆತ ಆಗದಿರುವಂತೆ ಮತ್ತು ಮೀನುಗಾರರನ್ನು ರಕ್ಷಿಸುವುದಕ್ಕೆ ವಿಶೇಷವಾದಂಥ ಯೋಜನೆಗಳನ್ನು ಮಾಡಬೇಕು. ಪಕ್ಕದೆ ರಾಜ್ಯಗಳಾದ ಕೇರಳ ಮತ್ತು ಆಂಧ್ರದವರು ಯೋಜನೆಗಳನ್ನು ಮಾಡಿದ್ದಾರೆ. ಈ ವಿಷಯದಲ್ಲಿ ಕರ್ನಾಟಕ ಹಿಂದೆ ಬಿದ್ದಿದೆ. ಹಾಗೆ ಆಗಬಾರದು. ನಮ್ಮ ದೇಶದಲ್ಲಿ ಸಮುದ್ರವಿರುವಂಥ ಅನೇಕ ರಾಜ್ಯಗಳು ಸಮುದ್ರ ತಡೆಗೋಡೆಗಳನ್ನು ನಿರ್ಮಿಸಲು ಬಹಳ ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಆ ವಿಷಯದಲ್ಲಿ ಕರ್ನಾಟಕ ಹಿಂದೆ ಬೀಳಬಾರದು. ಸಮುದ್ರ ಕೊರೆತವನ್ನು ನಿಲ್ಲಿಸಲು ಕೇಂದ್ರ ಸರ್ಕಾರದಲ್ಲಿ ಸಾಕಷ್ಟು ಯೋಜನೆಗಳಿವೆ, ಸಾಕಷ್ಟು ಹಣವಿದೆ. ಆದ್ದರಿಂದ, ಈ ಹೊಸ ಸರ್ಕಾರ ಸಮುದ್ರ ಕೊರೆತವನ್ನು ನಿಲ್ಲಿಸಲು ಬೇಕಾಗಿರುವಂಥ ಸಹಾಯವನ್ನು ಕೇಂದ್ರದಿಂದ ಪಡೆದು ಸಮುದ್ರ ಕೊರೆತವನ್ನು ನಿಲ್ಲಿಸಬೇಕು ಎಂದು ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಬೃಹತ್ ಕೈಗಾರಿಕೆ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಉಡುಪಿ ಕ್ಷೇತ್ರದ ಗೌರವಾನ್ವಿತ ಶಾಸಕರಾಗಿರುವಂಥ ಶ್ರೀಮಾನ್ ರಘುಪತಿ ಭಟ್‌ರವರು ಇವತ್ತು ಶೂನ್ಯ ವೇಳೆಯಲ್ಲಿ ಸಮುದ್ರ ಕೊರೆತದಿಂದ ಮತ್ತು ಈ ವರ್ಷ ಹೆಚ್ಚಾಗಿ ಮಳೆಯಾಗಿರುವುದರಿಂದ ಆಗಿರತಕ್ಕಂಥ ಅನಾಹುತದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವರಿಗೆ ಧ್ವನಿಗೂಡಿಸಿದಂಥ ಮಾನ್ಯ ಯೋಗೇಶ್ ಭಟ್‌ರವರು ಮತ್ತು ಮಾನ್ಯ ವಿಶ್ವೇಶ್ವರ ಹೆಗಡೆಯವರೂ ಕೂಡ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಈ ವಿಚಾರವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ನಾವು ಹೆಚ್ಚಿನ ಮಾಹಿತಿಗಳನ್ನು ಈ ಸದನಕ್ಕೆ ತರಿಸಿಕೊಂಡಿಲ್ಲ. ಇದರ ಜೊತೆಗೆ, ನಿನ್ನೆ ಮಾನ್ಯ ಜಯಪ್ರಕಾಶ ಹೆಗಡೆಯವರೂ ಕೂಡ ನನ್ನ ಜೊತೆ ಮಾತನಾಡಿ ಸಮುದ್ರ ಕೊರೆತದಿಂದ ಬಹಳ ತೊಂದರೆಯಾಗುತ್ತಿದೆ ಎಂದು ಹೇಳಿದರು. ಅವರು ಹೇಳಿದ ಹಾಗೆ ಈ ಬಗ್ಗೆ ಎರಡು ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ಒಂದು ತಾತ್ಕಾಲಿಕ ಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತೊಂದು- ಶಾಶ್ವತವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಅವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಸಮುದ್ರ ಕೊರೆತ ಉಂಟಾಗಿರುವ ಕಡೆಗಳಿಗೆ ಸರ್ಕಾರ ಅಧಿಕಾರಿಗಳ

ಟೀಮನ್ನು ಕಳುಹಿಸಿ ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಎಂದು ಮಾನ್ಯ ರಘುಪತಿ ಭಟ್‌ರವರು ಹೇಳಿದ್ದಾರೆ. ಈ ಇಲಾಖೆಗೆ ನಾವು ಇನ್ನೂ ಸಚಿವರನ್ನು ನೇಮಕ ಮಾಡಿಲ್ಲ. ಈ ಖಾತೆ ಮುಖ್ಯಮಂತ್ರಿಗಳ ಹತ್ತಿರವೇ ಇದೆ. ಆದ್ದರಿಂದ, ನಾನು ಮುಖ್ಯಮಂತ್ರಿಗಳಿಗೆ ಈ ವಿಚಾರವನ್ನು ಇವತ್ತೇ ತಿಳಿಸಿ, ಸಂಬಂಧಪಟ್ಟ ಅಧಿಕಾರಿಗಳಿಂದ ವರದಿಗಳನ್ನು ತರಿಸಿಕೊಂಡು ಕ್ರಮ ತೆಗೆದುಕೊಳ್ಳುವಂಥ ಭರವಸೆಯನ್ನು ಕೊಡುವುದರ ಜೊತೆಗೆ ಅಲ್ಲಿಯ ಮೀನುಗಾರರಿಗೆ ಆಗಿರುವಂಥ ತೊಂದರೆ ಮತ್ತು ಅವರಿಗೆ ನೀಡಬೇಕಾಗಿರುವಂಥ ರಕ್ಷಣೆ ಇವೆರಡರ ಬಗ್ಗೆಯೂ ನಾನು ಪ್ರಸ್ತಾಪ ಮಾಡಿ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ. ಸೀಬರ್ಡ್ ಯೋಜನೆ ಬಗ್ಗೆ ಅವರು ಹೇಳಿದ್ದಾರೆ. ಸೀಬರ್ಡ್ ಯೋಜನೆಯಿಂದ ಆಗುತ್ತಿರುವಂತ ತೊಂದರೆಗಳು, ಇತ್ಯಾದಿ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ತಾವು ಇದರ ಬಗ್ಗೆ ಸವಿಸ್ತಾರವಾಗಿ ಮಾತನಾಡಿ, ಅಧಿವೇಶನ ಮುಗಿದ ನಂತರ ನಾನು ಸೀಬರ್ಡ್ ಯೋಜನೆ, ಕಾರವಾರ ಮತ್ತು ಎಂಟ್ಯೆರ್ ಕೋಸ್ಟಲ್ ಏರಿಯಾಗಳಿಗೆ ಭೇಟಿ ನೀಡುತ್ತಿದ್ದೇನೆ. ನಾನೂ ಇದನ್ನು ಗಮನಿಸಿ, ಇದರ ಬಗ್ಗೆ ಆದಷ್ಟು ಕ್ರಮ ತೆಗೆದುಕೊಳ್ಳಲು ಅಧಿಕಾರಿಗಳ ಮೂಲಕ ಪ್ರಯತ್ನವನ್ನು ಮಾಡುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಂ.ವೈ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯ ಅಫ್ಜಲ್‌ಪುರ ತಾಲ್ಲೂಕು ಮತ್ತು ಸುರಪುರ ತಾಲ್ಲೂಕಿನಲ್ಲಿ ಅನೇಕಾಲು ರೋಗದಿಂದ.....

ಅಧ್ಯಕ್ಷರು ; ದಯಮಾಡಿ ಸದಸ್ಯರು ಕುಳಿತುಕೊಳ್ಳಬೇಕು.

4.) ಪ್ರಕಟಣೆ

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 9ನೆಯ ನಿಯಮದ ಮೇರೆಗೆ ಈ ಕೆಳಕಂಡ ಸದಸ್ಯರುಗಳನ್ನು ಪ್ರಸ್ತುತ ಅಧಿವೇಶನದ ಸಮಯದಲ್ಲಿ ನನ್ನ ಗೈರುಹಾಜರಿಯಲ್ಲಿ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲು ನಾಮನಿರ್ದೇಶನ ಮಾಡಿದ್ದೇನೆ.

ಶ್ರೀಯುತರುಗಳಾದ :

1. ಡಿ.ಆರ್. ಪಾಟೀಲ್
2. ಅಂಜನಮೂರ್ತಿ
3. ಎ.ಟಿ. ರಾಮಸ್ವಾಮಿ
4. ಆರಗ ಜ್ಞಾನೇಂದ್ರ
5. ಜಗದೀಶ್ ಶೆಟ್ಟರ್
6. ಕೆ. ಜಯಪ್ರಕಾಶ್ ಹೆಗ್ಡೆ

5. ಸಭೆಯ ಮುಂದಿಡಲಾದ ಕಾಗದಪತ್ರಗಳು

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿ) :

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿ) ಅವರ ಪರವಾಗಿ : ಮಾನ್ಯ